doc 43
T.P-2

Regd No M 1229 | 43rd Year | Sri 'Satyavadi' Mysore | 28—4—1959

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
" ಸತ್ಯವಾದಿ " ಪತ್ರಿಕೆಯನ್ನು
ತಪ್ಪದೇ ಓದಿ
ದಿನಪತ್ರಿಕೆ ತಿಂಗಳಿಗೆ 6 ಆಣೆ

ಸತ್ಯವಾದಿ

ಸಂಸ್ಥಾಪಕರು— ಅರಮನೆ ಸಿಂಹೇದಾರ್ ಎಂ. ವಿ ಸುಬ್ಬರಾಯುರು [ಬಿಡಿ ಪ್ರತಿ 3ಪೈ

Protectthecow
ಗೋಸಂರಕ್ಷಣೆ ಮಾಡಿ
ಗೋ ರಕ್ಷಣಾ ಕಾರ್ಯಕ್ಕೆ
ಹೆಚ್ಚು ಪ್ರಚಾರ ನಡೆಯಲಿ

ಹುಬ್ಬಳಿ ಪುರಸಭೆ ಮನೆ ಕಂದಾಯವನು ಹೆಚ್ಚು ಮಾಡಿದ ಕಾರಣ
ಬಳ | ಯ

ಸಾರ್ವಜನಿಕರ ತೀವ್ರ ಪ್ರತಿಭಟನೆ

ಭಾರತದಲ್ಲಿ ಆಶ್ರಯ

ನವ ದೆಹಲಿ 27 — ಕೆಲವು ಸಾವಿರ ಟಿಬೆಟಿನವರು ಭಾರತಕ್ಕೆ ಬಂದಿರುವರು ಕೆಲವು ಸಾವಿರ ಜನ ಭೂತಾನಿಗೆ ಬಂದಿರುವರು ಎಂದು ಪಂ|| ನೆಹರು ತಿಳಿಸಿರು ಪರು ನಿರಾಶ್ರಿತರಿಗೆ ಭಾರತದಲ್ಲಿ ಆಶ್ರಯ ಕೊಟ್ಟಿದೆ ಎಂದು ತಿಳಿಸಿದರು

ಮಾಸ್ಕಿಕ ಪರಿಶೀಲನೆ

ನೇಪಾ 27 — ಅಣುಬಾಂಬು ಪ್ರಯೋಗ ಸಂದರ್ಭದಲ್ಲಿ ವಾರ್ಷಿಕ ತನಿಖೆಯನ್ನು ರದ್ದು ಸೂಚಿಸಿದೆ

ಭೂಮಿತಿ 40 ಎಕರೆ

ಲಕ್ನೊ 27 — 40 ಎಕರೆ ಭೂಮಿತಿ ಮಾಡುವ ಹಂಗಾಮಿ ನಿರ್ಧಾರವನ್ನು ಉತ್ತರ ಪ್ರದೇಶ ಸರ್ಕಾರ ಕೈಗೊಂಡಿದೆ

ಮಾದ ವ್ಯಕ್ತತೆ

ನವ ದೆಹಲಿ 27 — ಚೀನ ಪ್ರಜಾ ಕಾಂಗ್ರೆಸಿನಲ್ಲಿ ಕೆಲವು ಭಾಷಣಗಳು ಭಾರತವನ್ನು ಟೀಕೆ ಮಾಡಿರುವ ಬಗ್ಗೆ ಭಾರತ ಸರ್ಕಾರ ಚೀನಾಕ್ಕೆ ವಿಷಾದ ತೋರಿದೆ

ಬಂಧನವಿಲ್ಲ

ಈ ತಿಂಗಳ 23 ಕ್ಕೆ ಆದ ವಾದದಲ್ಲಿ ಬೇಗಂ, ಬಿಧರಿ, ಉತ್ತರ ಕರ್ನಾಟಕದಲ್ಲಿ ಗಡಿ ಸತ್ಯಾಗ್ರಹ ಸಂಬಂಧದಲ್ಲಿ ಬಂಧನವಾಗಿಲ್ಲ.

ನವ ದೆಹಲಿ 27 — ನೆಹರು-ತಾರಾ ಸಿಂಗ್ ಒಪ್ಪಂದಕ್ಕೆ ಅಕಾಲಿ ಸಿಕ್ಕರು ದಿಗಿಲಿಗೊಂಡಿದ್ದಾರೆ

ಹುಬ್ಬಳ್ಳಿ — ಹುಬ್ಬಳ್ಳಿ ಪೌರಸಭೆ ಮನೆ ಕಂದಾಯವನ್ನು ಹೆಚ್ಚಿಸಿದ್ದಕ್ಕೆ ಪ್ರತಿಭಟನೆ ಸೂಚಿಸುವ ಸಲುವಾಗಿ ಈ ತಿಂಗಳು 26 ನೆಯ ತಾ|| ಹುಬ್ಬಳ್ಳಿ ನಗರ ಸೇವಾ ಸಂಘದವರ ಕರೆಯ ಪ್ರಕಾರ ಸಾರ್ವತ್ರಿಕ ಹರತಾಳ ನಡೆಯಿತು ಆ ದಿನ ಬೆಳಿಗ್ಗೆ ನಗರದ ಅಧ್ಯಂತ ಮೌನವಣಿಗೆಯನ್ನು ತೆಗೆದುಕೊಂಡು ಹೋಗಲಾಯಿತು.

— × —

ಮೈಸೂರು 27 — ಮೇ 1 ನೇ ತಾ|| ನಿಂದ 5 ನೇ ತಾ|| ವರಿಗೆ ಮೈಸೂರು ನಗರದಲ್ಲಿ 4 ನೇ ರಾಷ್ಟ್ರೀಯ ರೈತಕ ಸಮ್ಮೇಳನ ಸಮಾವೇಶವಾಗುವದು ದೆಹಲಿ ಹೊರಗಡೆ ನಡೆಯುತ್ತಿರುವದು ಇದೇ ಪ್ರಥವ ಸಮ್ಮೇಳನ 8 ಸಾವಿರ ಜನರು ಇದರಲ್ಲಿ ಭಾಗವಹಿಸುವರು ಎಂದು ಸ್ವಾಗತ ಸಮಿತಿ ಅಧ್ಯಕ್ಷರಾದ ಮೈಸೂರಿನ ಆಹಾರ ಮಂತ್ರಿಗಳಾದ ಶ್ರೀ ಕೆ. ಎಫ್. ಪಾಟೀಲರು ತಿಳಿಸಿದರು.

ವಾರಣಾಸಿ 27 — ಸಮಾಜವಾದಿ ಪಕ್ಷದ ರಾಷ್ಟ್ರೀಯ ಸಮ್ಮೇಳನ ಸರ್ವ ಏಧದ ಆದಾಯಕ್ಕೂ ಮಿತಿ ಬರಬೇಕೆಂಬುದಾಗಿ ಸೂಚಿಸಿದೆ.

ನವ ದೆಹಲಿ 27 — ವಾಷಿಂಗ್ಟನ್‌ನಲ್ಲಿ ಸಹಿಯಾದ ಒಪ್ಪಂದದಂತೆ ಪಾಕಿಸ್ತಾನಕ್ಕೆ ಭಾರತ 7 ಮಿಲಿಯ ಎಕರೆ ನೀರನ್ನು ಬಿಡಲು ಅಂಗೀಕರಿಸಿದೆ

ರಾಜ್ಯರ 27 — ಶಾಲಾ ಶಿಕ್ಷಣ ಉತ್ಪಾದನಾ ಕಾರ್ಯದೊಡನೆ ಸೇರಿರಬೇಕೆಂದು ಪಂಜಾಬಿನ ಗವರ್ನರರಾದ ಶ್ರೀ ಎಸ್ ವಿ ಗಾಡಗೀಲರವರು ತಿಳಿಸಿದರು.

ವಿವಿಧ ವರ್ತಮಾನ

ನವ ದೆಹಲಿ 27 — ಇಂಗ್ಲೀಷು ಭಾರತದ ರಾಷ್ಟ್ರಭಾಷೆ ಆಗಬೇಕೆಂಬ ಫ್ರಾಂಕ್ ಆಂಥನಿಯವರ ನಿರ್ಣಯವನ್ನು ಪಾರ್ಲಿಮೆಂಟಿನ ಮುದರಾಸು ಸದಸ್ಯರು ಬೆಂಬಲಿಸುವರೆಂದು ಗೊತ್ತಾಗಿದೆ

ಚಂಡೀಘರ 27 — ದೇಶದ ಭಾಷೆಗಳ ಅಭಿವೃದ್ಧಿಗೆ ವಿಶ್ವ ವಿದೇಶ ಒಗ್ಗಟ್ಟಿಗೆ ಸಂಸ್ಕೃತದ ಅಭಿವೃದ್ಧಿ ಅಗತ್ಯವೆಂದು ಪಂಜಾಬಿನ ಗವರ್ನರರಾದ ಶ್ರೀ ಎಸ್. ವಿ ಗಾಡಗಿಲ್ ತಿಳಿಸಿದರು

ಈ ವರ್ಷ ಸೆಪ್ಟೆಂಬರಿನಲ್ಲಿ ಜುದಂತ ಸಿನಲ್ಲಿ ಪೋಲೀಸು ಸೇವೆ ಪ್ರಾರಂಭವಾಗಿ ನೂರು ವರ್ಷಗಳು ಮುಗಿಯುವವು.

ನವ ದೆಹಲಿ 27 — ಪ್ರಾಂತ ಸಹಕಾರ ಮಂತ್ರಿಗಳ ಸಮ್ಮೇಳನ ಜುಲೈ ತಿಂಗಳಿನಲ್ಲಿ ಮೈಸೂರಿನಲ್ಲಿ ನಡೆಯುವುದು.

ತಿರುವೇಂದ್ರಂ 27 — ಸ್ವತ್ತುಗಳನ್ನು ಹೊಂದಲು, ಮಾರಾಟ ಮಾಡಲು ಇರುವ ಹಕ್ಕಿನ ಮೇಲೆ ಸೂಕ್ತ ನಿರ್ಬಂಧ ವಿಧಿಸಲು ಪ್ರಾಂತ ಶಾಸನ ಸಭೆಗೆ ಅಧಿಕಾರ ಇದೆಯೆಂದು ಕೇರಳದ "ಡೊವೆಕೇಟ್ ಜನರಲ್" ಅಭಿಪ್ರಾಯಪಟ್ಟಿರುವರು.

ನವ ದೆಹಲಿ 27 — ರಾಜ್ಯಸಭೆಯಲ್ಲಿ ವಿರೋಧ ಪಕ್ಷದ ಸದಸ್ಯ ಶ್ರೀ ಜಸ್ವಂತ ಸಿಂಗರು ಪಾಸಪ್ರತಿಬಂಧೆ ಎಂದಾಗಬೇಕೆಂದು ಒತ್ತಾಯಮಾಡುತ್ತಾ, ಕೆಲವು ಕಾಂಗ್ರೆಸು ಸ್ನೇಹಿತರು ತಮ್ಮಿಂದ ಪಾಸ ಸ್ವೀಕರಿಸಿ ಅವನ್ನು ಪ್ರಶಂಸಿಸದರೆಂದು ತಿಳಿಸಿದರು.

ನಾಳೆಯ ಪಂಚಾಂಗ

ಆ|| ಮಹಾವಿದ್ವಾನ್ ದೈವಜ್ಞ ಶಿಖಾಮಣಿ
ಸಂಪತ್ಕೃಷ್ಣ ಜೋಯಿಸರಿಂದ
29 ಸಪ್ತಮಿ ಉತ್ತರಾಷಾಢ

ಪ್ಲಾಸ್ಟಿಕ್ಸ್ ಕೈಗಾರಿಕೆಯಲ್ಲಿ ಬ್ರಿಟನ್ ಸ್ವಾವಲಂಬಿ ಆಗಿದೆ

ಹತ್ತು ಸಾವಿರ ಪಲ್ಲ ಭತ್ತ ಸಂಗ್ರಹಿಸಿಕೊಡುವಭರವಸೆಯನ್ನು ತುಮಕೂರು ಗಿರಣಿ ಮಾಲೀಕರು ಇತ್ತಿದ್ದಾರೆ

ನವ ದೆಹಲಿ 27 — ಮೇ 4 ನೇ ರಾಜ್ಯಸಭೆಯಲ್ಲಿ ಟಿಬೆಟ್ ಬಗ್ಗೆ ಚರ್ಚೆ ನಡೆಯುವುದು.

ಮದ್ರಾಸು 27 — ಕೇಂದ್ರ ಸರಕಾರ ಕೊಂಡಿರುವ ನೆಲ್ಲೂರು ಅಕ್ಕಿ ಮದ್ರಾಸಿಗೆ ಸಾಗುತ್ತಿದೆ.

ನವ ದೆಹಲಿ 25 — ಮಿಡತೆಗಳು ಭಾರತದ ಮೇಲೆ ಧಾಳಿ ಮಾಡುವ ಭೀತಿ ಇದೆ.

ಬೆಂಗಳೂರು ಕಾರ್ಪೊರೇಷನ್‌ಗೆ ರೂ 1 ಲಕ್ಷ 15 ಸಾವಿರ ಉಳುವರಿ ಸಿಕ್ಕಿದೆ ಹೊಸತೆರಿಗೆಗಳಾವುವನ್ನು ವಿಧಿಸಿಲ್ಲ

ಮಧುರಾ 27 — ಕಾಂಗ್ರೆಸು ಅಧ್ಯಕ್ಷೆಣಿ ಶ್ರೀಮತಿ ಇಂದಿರಾ ಗಾಂಧಿ ಇಲ್ಲಿಂದ ರಾಜಸ್ಥಾನ್ಯಂಗೆ ತೆರಳಿದರು

ನವ ದೆಹಲಿ 27 — ತುಳಕೆಗ್ಯಾಮು ವಾವಸು ಪಡೆಯಲು ಸೇನಾ ಕಾರ್ಯಾಚರಣೆ ಕೈಗೊಳ್ಳುವದಿಲ್ಲವೆಂದು ಪಂ|| ನೆಹರು ಲೋಕಸಭೆಯಲ್ಲಿ ತಿಳಿಸಿದರು

ಬೆಂಗಳೂರು 27 — ಮುಖ್ಯಮಂತ್ರಿಯವರ ಮನೆ ಮುಂದೆ ಸತ್ಯಾಗ್ರಹ ಹೂಡಲು ಕೋಲಾರದಿಂದ ಬಂದ 16 ಜನರ ಎಂಡು ತಂಡವನ್ನು ಪೋಲೀಸರು ಬಂಧಿಸಿದರು

ನವ ದೆಹಲಿ 27 — ಅಂತರ ವಿಶ್ವ ವಿದ್ಯಾನಿಲಯದ ಯುವಕ ಹಬ್ಬ ಮುಂದಿನ ಜುಲೈ ಮೈಸೂರಿನಲ್ಲಿ ನಡೆಯುವದು.

ದೇಶಪ್ರೇಮಿ ಮತ್ತು ಮಹಾತ್ಯಾಗಿ

ಭಾರತ ಸ್ವಾತಂತ್ರ್ಯ ಚಳವಳಿಯಲ್ಲಿ 'ಅಂಡರ್‌ಗ್ರೌಂಡ್' ಕಾರ್ಯ ನಡೆಸುತ್ತಿದ್ದ, ಕಾಂಗ್ರೆಸಿಗಳಾಗಿಯೂ, ಕಾಂಗ್ರೆಸಿನ ಭಿನ್ನತತ್ವದವಳಾಗಿಯೂ, ಸೋಶಲಿಸ್ಟಳಾಗಿಯೂ, ಕಮ್ಯುನಿಸ್ಟಳಾಗಿಯೂ ಇದ್ದ, ಈಗ ಸ್ವತಂತ್ರಳಾಗಿರುವ ಮತ್ತು ದೆಹಲಿಯ ಪೌರಸಭೆಗೆ ಎರಡನೇ ಬಾರಿ ಅಧ್ಯಕ್ಷಣೆಯಾಗಿ ಚುನಾಯಿಸಲ್ಪಟ್ಟಿರುವ ಅರುಣ್ ಅಸಫ್ ಅಲಿ ಯವರು ಹೀಗೆ ಹೇಳಿರುವರು —

'ನಾನು ರಾಜಕೀಯವನ್ನು ನನ್ನ ವೃತ್ತಿಯನ್ನಾಗಿ ಮಾಡಿಕೊಳ್ಳಲು ಇಚ್ಛಿಸುವುದಿಲ್ಲ ; ನಾನೇನಾದರೂ ಪಾರ್ಲಿಮೆಂಟು ಸದಸ್ಯೆಯಾದರೆ — ಇದು ಸಂಭವಿಸುವುದು ನನಗೆ ಸಂಶಯ — ಸಂಬಳವಿಲ್ಲದೆ ಕೆಲಸಮಾಡಬಲ್ಲೆ ; ಆ ಸೇವೆಯು ಜನತೆಯ ಧ್ವನಿ ಮತ್ತು ರಕ್ಷಕಳಾಗಿದ್ದು, ಉಚಿತವಾಗಿ ಮಾಡಲ್ಪಡಬೇಕೆಂದು ನಾನು ಯೋಚಿಸುತ್ತೇನೆ'.

ವಿವಿಧ ವಿಷಯಗಳು

ನವದೆಹಲಿ 25— ಅಮೇರಿಕಾವು ಭಾರತಕ್ಕೆ ಗೋಧಿ ಸಾಲವನ್ನು ಈ ವರ್ಷ ಕೊಡುವ ಸಂಭವವಿದೆ.

೦ ೦ ೦ ೦

ಸಿಂಗಪುರ 24— ತನ್ನ ರಾಜಕೀಯವಿಷಯುಕ್ತಾಗಿ ಇಲ್ಲಿ ಡಚಿನ್ನು ಆಗಿ ಳಿದ 34 ವರ್ಷದ ಭಾರತೀಯ ಜೀವನ್ಸ್ ಪುದುಚಾರಿ ಒಂದು ಪುಸ್ತಕ ಬರೆದಿದಾನೆ.

೦ ೦ ೦ ೦

ಉಡಕಮಂಡ್ 24— ಮದರಾಸು ಸರ್ಕಾರವು ಬಸ್ಸುಗಳಲ್ಲಿ ಸ್ತ್ರೀಯರನ್ನು ಕಂಡಕ್ಟರುಗಳಾಗಿ ನೇಮಿಸುವ ಯೋಜನೆ ಹೊಂದಿಲ್ಲವೆಂದು ಕೈಗಾರಿಕೆ ಮತ್ತು ಕಾರ್ಮಿಕ ಮಂತ್ರಿ ವೆಂಕಟರಾಂ ಹೇಳಿರುವರು.

೦ ೦ ೦ ೦

ಸ್ಟ್ರಾಟ್‌ಫರ್ಡ್ ಆನ್ ಎವನ್ 24— ಷೇಕ್ಸ್‌ಪಿಯರು ವಿಶ್ವಕವಿಯು ಜನ್ಮದಿನೋತ್ಸವ ಸಮಾರಂಭಕ್ಕೆ ವಿವಿಧದೇಶದ ರಾಯಭಾರಿಗಳು ಮತ್ತು ಪ್ರಖ್ಯಾತ ನಟನಟಿಯರು ಬಂದಿದ್ದಾರೆ — ಷೇಕ್ಸ್‌ಪಿಯರಿನ ಗೋರಿಯ ಮೇಲೆ ಹೂವಿನ ಸುರಿಮಳ್ಳೆಯೇ ಸುರಿಸಲಾಯಿತು.

೦ ೦ ೦ ೦

ವ್ಯಾರಿಸ್ಸು 24 — ಹೊಲಿವುಡ್ಡಿನ ಮಾಜಿ ಪ್ರಖ್ಯಾತ ನಟಿ — ಈಗ ಮೊನಾಕೋ ರಾಜಕುಮಾರಿ — ಗ್ರೇಸ್ ಕೆಲ್ಲಿ, ತನ್ನ ಅರಮನೆಯಲ್ಲಿನ 200 ಮಂದಿ ನೌಕರರಲ್ಲಿ ಅರ್ಧದಷ್ಟನ್ನು ವಜಾಮಾಡಿರುವವಳಾಗಿದ್ದಾಳೆ : ತಾನೇ ಮನೇ ಆಡಳಿತ ನೋಡಿಕೊಳ್ಳುತ್ತಾಳೆ ಇವರಿಗೆ 30000 ಪೌಂಡು ವಾರ್ಷಿಕ ಆಲೋಯನ್ಸು ದೊರೆಯುತ್ತದೆ ; ಇನ್ನು ಚಲನಚಿತ್ರಗಳಲ್ಲಿ ತನಗೆ ಏನೂ ಉತ್ಸಾಹವಿಲ್ಲವೆಂದು ಹೇಳುತ್ತಾಳೆ.

SHAKTI SUDHA

A Superb Tonic

ಅಪೆರಾ— 26-4-59 ರಿಂದ

ಇಬ್ಬರು ಸಹೋದರಿಯರು ತಮಿಳು

ಪಾತ್ರ— ಜಮಿನಿ ಗಣೇಶ್, ಸಾವಿತ್ರಿ, ನಂಬಿಯಾರ್, ಗಿರಿಜಾ, ದೊರೈರಾಜ್

ಪ್ರತಿದಿನ 3 ಆಟಗಳು

ವುಡ್‌ಲಾಂಡ್

Glorious 4th Week

ಒಮ್ಮೆ ನೋಡಿದರೆ ಮತ್ತೊಮ್ಮೆ ನೋಡ ಬೇಕೆನ್ನಿಸುವ ಚಿತ್ರ

ಅನಾಡಿ

(ಹಿಂದಿ)

ತಾರಾಗಣ— ನೂತನ್, ರಾಜ್ ಕಪೂರ್

ಮೋತೀಲಾಲ್, ಶುಭಾ ಖೋಟೆ

ಗೋಂಕ್ಷಣ, ಪ್ರಾಣಿದಯಾ ಕಾರ್ಯಗಳು ಹೆಚ್ಚೆಚ್ಚಾಗಿ ನಡೆಯಲಿ



ಗೋರಕ್ಷಣ ಪತ್ರಿಕೆಗೆ ಬೆಂಬಲಿಗರಾಗಿರಿ

ಗೋರಕ್ಷಣೆ, ಪ್ರಾಣಿದಯೆ, ಪಶುವೈದ್ಯ, ಶಾಕಾಹಾರ ವಿಚಾರಗಳ ಪ್ರಚಾರಕ್ಕೆ ಏಕೈಕ ಕನ್ನಡ ಪತ್ರಿಕೆ.

ಪೋಷಕರು ರೂ 25, ಬೆಂಬಲಿಗರು ರೂ 10 (ಒಂದೇ ಸಾರಿ).

ಗೋರಕ್ಷಣ ಪತ್ರಿಕೆಯಲ್ಲಿ ಪ್ರಕಟಿಸಲು ಅನುಕೂಲವಾದ ಲೇಖನಗಳನ್ನು ವಾರ್ತೆಗಳನ್ನೂ ಸಾದರವಾಗಿ ಸ್ವೀಕರಿಸಲಾಗುವುದು

Advertise in Goraksana and help the pious cause

ವಿಳಾಸ : ಗೋರಕ್ಷಣ ಆಫೀಸ್, ಚಾಮರಾಜಪುರಂ, ಮೈಸೂರು

ಎಲ್ಲ ವಿಧದ ಆಯುರ್ವೇದ ಔಷಧಗಳಿಗೂ

ಆ ಶೋ ಕಾ ಫಾರ್ಮಸಿ

ಅಶೋಕ್‌ರೋಡ್ ಬಜಾರ್ ಮೈಸೂರು

For Quality Printing

L. N. Press

Sivarampet, Mysore

Edited, Printed & Published by Dharma Prachara Nirata M. S. Krishna Rao, at the Satyavadi Press Chamarajapuram, Mysore.